Sri K. H. PATIL.—A representation has been made and it has been sent to the Deputy Commissioner for remarks as to the price prevailing. The Deputy Commissione's report has not been received till 10.30 p.m. last night. I have sent a telephone message to him.

Sri D. B. KALMANKAR.—Has it come to the notice of the Government that the Deputy Commissioner was insisting for Rs. 2 per quintal to be paid for construction of Stadium ?

Sri K. H. PATIL.—As I have specifically stated collection of any amount for construction of Stadium is very bad. This is voluntary contribution. Therefore, I have specifically instructed the Deputy Commissioner not be enforce this and collect any amount out of the price of Bajra.

Sri D. B. KALMANKAR.—The request of the merchants is that Rs. 94 per quintal as at Bellary may be given. Will the Government consider and give that rate ?

Sri K. H. PATIL.—I have issued instructions to the Deputy Commissioner.

Seventeenth Report of the Committee on Private Members' Bills and Resolutions

Sri P. M. BANGI (Jamkhandi).—I present the Seventeenth Report of the Committee on Private Members' Bills and Resolutions.

Smt. RADHA BHAT.—I move that this House agrees with the report.

Madam SPEAKER.—I think the House agree with the report.

(The Hon. Members agreed with the report).

Taking up an adjournment motion about Discussion and alleged remarks against the State Ministry at the Lok Sabha

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ನಾವೆಲ್ಲ ಸೇರಿ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಲೋಕಸಭೆಯಲ್ಲಿ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳ ಬಗ್ಗೆ ಮತ್ತು...

ಅಧ್ಯಕ್ಷರು.—ಅನ್ಯ ಸದಸ್ಯರ ನಿಲುವಳಿ ಸೂಚನೆಯನ್ನು ನಾನು ನೋಡಿದ್ದೇನೆ ಅದು ನಿಲುವಳಿ ಸೂಚನೆ ಹೇಗೆ ಆಗುತ್ತದೆ ? ಅದು ಪುರಾತನವಾದ ವಿಷಯವೇ ? ನಿನ್ನೆ ಮೊನ್ನೆ ನಡೆದ ವಿಷಯವೇ ? ಅದರ ಬಗ್ಗೆ ಮಾತನಾಡುವುದಕ್ಕೆ ಸಾಕಾದಷ್ಟು ಅವಕಾಶಗಳಿವೆ ಅದು ನಿಲುವಳಿ ಸೂಚನೆಯಿಲ್ಲಿ ಬರುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಜಾಜಿನಗರ).—ನಾವು ವಿಧಿನಿಯಮಗಳ ಪ್ರಕಾರ ತಮ್ಮ ಅವಗಾಹನೆಗೆ ಒಂದು ಸೂಚನೆಯನ್ನು ಕಳುಹಿಸಿದ್ದೇವೆ.

ಅಧ್ಯಕ್ಷರು.—ನಾನೂ ವಿಧಿನಿಯಮಗಳ ಪ್ರಕಾರವೇ ಹೇಳಿದ್ದೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಂತ್ರಿಮಂಡಲ ಅಸ್ತಿತ್ವದಲ್ಲಿಯೇ ಇಲ್ಲವೇ ಎನ್ನುವ ಪ್ರಶ್ನೆ ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಕೆಲವು ಮಂತ್ರಿಗಳ ಮೇಲೆ ಸ್ವಜನ ಪಕ್ಷಪಾತ, ದುರಾಡಳಿತ, ದುರ್ನಡತೆ ಮುಂತಾದ ಇನ್ನೂ ಅನೇಕ ಆಪಾದನೆಗಳನ್ನು ಮಾಡಿದ್ದಾರೆಂದು ಲೋಕಸಭೆಯಲ್ಲಿ ಗೃಹಸಚಿವರು ಹೇಳಿದ್ದಾರೆ.

ಅಧ್ಯಕ್ಷರು.—ಆ ವಿಚಾರ ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲ.

ಶ್ರೀ ಎಸ್. ಎಂ. ಕೃಷ್ಣ (ಕೈಗಾರಿಕಾ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು).—ಇದು ನಿಲುವಳಿ ಸೂಚನೆ ಹೇಗಾಗುತ್ತದೆ ಎಂದು ನನಗೆ ಅರ್ಥವಾಗುವುದಿಲ್ಲ. ಕೆಲವು ತಿಂಗಳ ಕೆಳಗೆ ಪ್ರಧಾನ ಮಂತ್ರಿಯವರಿಗೆ ಕೆಲವು ಆಪಾದನೆಗಳನ್ನು ಕೆಲವು ಸದಸ್ಯರು ಮಾಡಿದ್ದಾರೆನ್ನುವುದು, ನಿಲುವಳಿ ಸೂಚನೆ ಹೇಗಾಗುತ್ತದೆ? ಅದೂ ಅಲ್ಲದೆ ಲೋಕಸಭೆಯಲ್ಲಿ ಚರ್ಚೆಯಾದುದನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎರಡೂ ಭೇರೆ ಭೇರೆ. ವಿಧಾನ ಪರಿಷತ್ತಿನಲ್ಲಿ ಪ್ರಸ್ತಾಪ ಮಾಡಿರುವುದನ್ನು ನಾವು ಇಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಬೇರೆ ಸಭೆಗಳಲ್ಲಿ ನಡೆದುದನ್ನು ಇಲ್ಲಿ ಪ್ರಸ್ತಾಪ ಮಾಡುವುದು ಮಾನ್ಯ ಕೋಣಂದೂರು ಲಿಂಗಪ್ಪನವರ ಉದ್ದೇಶವಲ್ಲ ಎಂದು ನಾನು ಭಾವನೆ ಮಾಡುತ್ತೇನೆ. ಇದೇನೂ ಜರೂರು ಮತ್ತು ತುರ್ತಾದ ವಿಷಯವಲ್ಲ, ಈಚೆಗೆ ನಡೆದದ್ದಲ್ಲ, ಇದರಲ್ಲಿ ನಿಲುವಳಿ ಸೂಚನೆಗೆ ಬೇಕಾಗಿರತಕ್ಕ ಪ್ರೈಮರಿ ಕ್ವಾಲಿಫಿಕೇಷನ್ಸ್ ಕೂಡ ಇಲ್ಲ. ಆದ್ದರಿಂದ ಇದನ್ನು ತಳ್ಳಿಹಾಕಬೇಕೆಂದು ಹೇಳ ತ್ತೇನೆ.

MADAM SPEAKER.—I fully agree with the Hon'ble Minister.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಕೂಡ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಇದಕ್ಕಿಂತ ಮುಖ್ಯವಾದ ವಿಚಾರ ಯಾವುದಿದೆ ಎಂದು ಕೇಳುತ್ತೇನೆ. ಮುಖ್ಯ ಮಂತ್ರಿಗಳು ಮತ್ತು ಇತರ ಕೆಲವು ಮಂತ್ರಿಗಳು ಸ್ವಜನ ಪಕ್ಷಪಾತ, ದುರಾಡಳಿತ ಮತ್ತು ದುರ್ನಡತೆಗಳಲ್ಲಿ ತೊಡಗಿದ್ದಾರೆಂದರೆ ಇದಕ್ಕಿಂತ ಮುಖ್ಯವಾದ ವಿಚಾರ ಬೇರೆ ಇಲ್ಲ. ಮಂತ್ರಿಮಂಡಲ ಅಸ್ತಿತ್ವದಲ್ಲಿರುತ್ತದೆಯೋ ಇಲ್ಲವೋ ಎನ್ನುವ ಸಂಶಯ ಬಂದಿದೆ. ಅವರೇ ಇಲ್ಲದಿದ್ದರೆ ನಾವು ಹೇಗೆ ಇಲ್ಲಿ ಚರ್ಚೆ ಮಾಡುವುದು? ಇವರ ಬದಲು ಬೇರೆ ಯಾರು ಬರ ತಾರೆ ಎನ್ನುವುದು ಗೊತ್ತಿಲ್ಲ. ಮಂತ್ರಿಗಳ ಮೇಲೆ ಯಾವ ಚಾರ್ಜಸ್ ಇವೆ ಎನ್ನುವುದನ್ನು ದಯವಿಟ್ಟು ತಿಳಿಸಲಿ. ಹಾಗೆ ತಿಳಿಸಿದರೆ ಮತ್ತು ಆ ಬಗ್ಗೆ ನಾವು ಚರ್ಚೆ ಮಾಡಿದರೆ ನಿಜಾಂಶವೇನು ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ. ಆಪಾದನೆಗಳು ಏನಾದರೂ ನಿಜವಾಗಿದ್ದಲ್ಲಿ ಇವರು ಒಂದು ನಿಮಿಷವೂ ಅಧಿಕಾರದಲ್ಲಿರುವುದಕ್ಕೆ ರಾಯಿಟ್ ಆಲ್ಲ ಎನ್ನುವ ತೀರ್ಮಾನಕ್ಕೆ ನಾವು ಬರುವುದಕ್ಕೆ ಅವಕಾಶವಾಗುತ್ತದೆ. ಇದು ಬಹಳ ಮುಖ್ಯವಾದ ವಿಚಾರವಾದ್ದರಿಂದ ಇದಕ್ಕೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಬಹಳ ದಿವಸಗಳ ಹಿಂದೆ ಕೆಲವು ಶಾಸಕರು ಮಾಡಿ ಆಪಾದನೆ ಮಾಡಿದ್ದಾರೆಂದು ಇದೆ. ಆಪಾದನೆ ಏನಿದೆ ಅದು ತೆಗೆದು ಹಾಕಿರುವ ಸಚಿವರ ಮೇಲೆ ಇದೆಯೋ ಇರುವ ಸಚಿವರ ಮೇಲೆ ಇದೆಯೋ ಎನ್ನುವುದು ಸಾಬೀತಾಗಬೇಕು. ಅಲ್ಲದೆ ಮುಖ್ಯ ಮಂತ್ರಿಗಳ ಮೇಲೆ ಸಹ ಆಪಾದನೆ ಇದೆ. ಇದರಲ್ಲಿರುವ ನಿಜಾಂಶವೇನು ಎನ್ನುವುದನ್ನು ಸಭೆ ತಿಳಿದುಕೊಳ್ಳಬೇಕಾಗಿರುವುದರಿಂದ ಚರ್ಚೆಗೆ ಅವಕಾಶ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಲೋಕಸಭೆಯಲ್ಲಿ ಗೃಹಸಚಿವರು ಹೇಳಿರತಕ್ಕ ಮಾತನ್ನು ಮಾನ್ಯ ಸಚಿವರು ಅಷ್ಟು ಲಘುವಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮಂತ್ರಿಗಳ ಮೇಲೆ ಬಹಳ ಗುರುತರವಾದ ಆಪಾದನೆಗಳಿವೆ. ಮಂತ್ರಿಮಂಡಲವೆ ಅಸ್ತಿತ್ವವೇ ಹೊರಟು ಹೋಗುತಕ್ಕ ಪರಿಸ್ಥಿತಿ ಇದೆ. ನಾಳೆ ದಿವಸ ಯಾರು ಮುಖ್ಯ ಮಂತ್ರಿಗಳಾಗುತ್ತಾರೆ ಎನ್ನುವುದು ಗೊತ್ತಿಲ್ಲ. ಪಕ್ಷದಲ್ಲಿ ಆಡಳಿತ ನಡೆಸುವವರು ಅಯೋಗ್ಯರು. ಹೋಗಬೇಕು ಎಂದರೆ ಹೋಗಬೇಕು. ಮಾಡಿರುವ ಆಪಾದನೆಗಳೇನು, ಅವನ್ನು ಯಾರು ಯಾರ ಮೇಲೆ ಮಾಡಿದ್ದಾರೆ ಎನ್ನುವುದನ್ನು ಖಚಿತವಾಗಿ ಸಭೆ ತಿಳಿದುಕೊಳ್ಳಬೇಕು ಕರ್ನಾಟಕದ ಜನತೆಗೆ ಯಾವ ಸರ್ಕಾರವಿರುತ್ತದೆ ಎನ್ನುವುದು ಸ್ಪಷ್ಟವಾಗಿ ತಿಳಿಯಬೇಕಾಗಿದೆ ಇದು ಜರೂರಾದ ವಿಷಯ. ಇದನ್ನು ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು —ಚರ್ಚೆಗೆ ಅವಕಾಶವಿಲ್ಲವೆಂದರೆ ಪ್ರತಿಯೊಬ್ಬರೂ ಅವರು ಹೇಳಬೇಕೆಂದಿರುವುದನ್ನು ಹೇಳುತ್ತ ಹೋದರೆ ಹೇಗೆ?

Sri H. M. CHANNABASAPPA (Minister for Public Works).—Government is not in receipt of any adjournment motion which has

been submitted to the Hon'ble Speaker. The Hon'ble Speaker, by virtue of her own decision, has already expressed that it is not admissible and that the hon. members have lot of opportunities during the course of the discussion to raise these points. In the circumstances, it would not be in order to have further discussions in the matter

Sri M. S. KRISHNAN.—We are not questioning the Chair's ruling.

MADAM SPEAKER.—I do not consider it to be a matter of public importance.

Sri M. S. KRISHNAN.—The Union Home Minister has stated that it is under consideration.

MADAM SPEAKER.—I have disallowed it. Please do not spend any time over it.

Release of Grants to the Mahila Samajas in the State

ಶ್ರೀಮತಿ ದಮಯಂತಿ ಬೋರೇಗೌಡ.—ಕೆಲವಾರು ದಿವಸಗಳ ಹಿಂದೆ ಮಾನ್ಯ ಕೈಗಾರಿಕಾ ಸಚಿವರು ಮಹಿಳಾ ಸಮಾಜಗಳಿಗೆ ಕೊಡುವ ಗ್ರಾಂಟಿನ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟರು ಅದು ಸ್ವಲ್ಪ ಸ್ಪಷ್ಟವಾಗಿಲ್ಲದ್ ಇರುವ ಕಾರಣದಿಂದ ಎಲ್ಲ ಮಹಿಳಾ ಸಮಾಜಗಳಿಗೂ ಗ್ರಾಂಟ್ ಸಿಕ್ಕುತ್ತದೆಯೋ ಇಲ್ಲವೋ ಎನ್ನುವ ಸಂಶಯ ಕೆಲವರಲ್ಲಿ ಬರುತ್ತಿದೆ. ಈ ಬಗ್ಗೆ ಸ್ಪಷ್ಟವಾಗಿ ತಿಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಕೈಗಾರಿಕಾ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ — ನಾನು ಸ್ಪಷ್ಟವಾಗಿ ಈಗಾಗಲೇ ತಿಳಿಸಿದ್ದೇನೆ. ಈಗ ಯಾವ ಯಾವ ಮಹಿಳಾ ಸಮಾಜಗಳು ಗ್ರಾಂಟನ್ನು ಪಡೆಯುತ್ತಿವೆಯೋ ಅವುಗಳಿಗೆ ಈ ವರ್ಷ ಕೊಡುತ್ತೇವೆ. 31-3-1974 ರೊಳಗೆ ಮಹಿಳಾ ಸಮಾಜಗಳವರು ಅವರಿಗೆ ಬರಬೇಕಾದ ಗ್ರಾಂಟ್ ಬಗ್ಗೆ ಸರ್ಕಾರಕ್ಕೆ ಅಪ್ಲೋಡ್ ಮಾಡಿದರೆ ಅದನ್ನು ಪ್ರೊಸೆಸ್ ಮಾಡಿ ಗ್ರಾಂಟ್ ಕೊಡುತ್ತೇವೆಂದು ಹೇಳಿದ್ದೇವೆ. ಈಚೆಗೆ ಏನು ತಿದ್ದುಪಡಿ ಮಾಡಿದ್ದೇವು ಅದನ್ನು ಅಪೇಯನ್ಸ್‌ನ್ಲ್ಲಿ ಇಟ್ಟಿದ್ದೇವೆ ಮತ್ತು ಈ ವರ್ಷಕ್ಕೆ ಗ್ರಾಂಟ್ಸ್ ಕೊಡುತ್ತೇವೆಂದು ಹೇಳಿದ್ದೇನೆ.

Budget Estimates for 1974-75—General Discussion (Debate Continued)

†ಶ್ರೀ ಎಂ. ಮಲ್ಲಪ್ಪ (ಬಿರೂರು).—ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ನಾನು ಕೃಷಿ ಅಭಿವೃದ್ಧಿ ಬಗ್ಗೆ ಸರಕಾರದ ಗಮನವನ್ನು ಸೆಳೆಯುತ್ತಿದ್ದೆ. ಹಸಿರು ಕ್ರಾಂತಿಯನ್ನು ನಮ್ಮ ದೇಶದಲ್ಲಿ ಅಭಿವೃದ್ಧಿ ಮಾಡಲೇಬೇಕು. ಇದುವರೆಗೂ ಸರಕಾರ ಇದರ ಬಗ್ಗೆ ಹೆಚ್ಚು ಗಮನ ಕೊಡಲಿಲ್ಲ. ಇದರ ಜೊತೆಗೆ ರಾಸಾಯನಿಕ ಗೊಬ್ಬರಗಳನ್ನು ಹಾಗೂ ಕ್ರಿಮಿನಾಶಕ ಔಷಧಿಗಳನ್ನೂ ಉಪಯೋಗ ಮಾಡಿ ಆದಷ್ಟು ರೈತರಿಗೆ ಹೆಚ್ಚು ಬೆಲೆ ಮಾಡಲು ಸ್ವಲ್ಪ ಮಟ್ಟಿಗಾದರೂ ಸಹಾಯ ಮಾಡಿದರೆ ಇದರಿಂದ ಸ್ವಲ್ಪ ಅನುಕೂಲಗಳು ಸಿಗಬಹುದು. ಇದರ ಜೊತೆಗೆ ಸರಕಾರವೇ ನೇರವಾಗಿ ಎಲ್ಲ ಸೌಲಭ್ಯಗಳನ್ನೂ ಒದಗಿಸಿಕೊಟ್ಟು ಅವರಿಗೆ ಸ್ವೇಚ್ಛೆತ್ಸಾಹ ಕೊಟ್ಟು ನಮ್ಮ ದೇಶ ಸ್ವಾವಲಂಬನೆ ಯಾಗುವಂತೆ ಮಾಡಬೇಕು. ಇದಕ್ಕಾಗಿ ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚಾಗಿ ಕೃಷಿ ಕೆಲಸಗಳನ್ನು ಅಭಿವೃದ್ಧಿ ಮಾಡಬೇಕೆಂದು ಸರಕಾರದಲ್ಲಿ ಒತ್ತಾಯ ಮಾಡುತ್ತೇನೆ.

ನಮ್ಮ ರಾಜ್ಯದಲ್ಲಿ ಅಡಕೆ ಬೆಳೆಯುವವರ ಸ್ಥಿತಿ ತುಂಬಾ ಕಷ್ಟದಲ್ಲಿದೆ. ನಿಜವಾಗಿಯೂ ಹೇಳಬೇಕಾದರೆ ಒಂದು ಎಕರೆಯಲ್ಲಿ ಅಡಕೆ ಬೆಳೆಯಬೇಕಾದರೆ ಹೈರು ಬೆಳೆಸಿ ಅದರಿಂದ ಫಸಲು ತೆಗೆಯಬೇಕಾದರೆ ಸುಮಾರು ನಲವತ್ತು ಸಾವಿರ ರೂಪಾಯಿಗಳಷ್ಟು ಖರ್ಚಾಗುತ್ತದೆ. ಆದರೆ ಇದರಿಂದ ಅವರಿಗೆ ಬರುವ ವರಮಾನ ಒಂದು ವರ್ಷಕ್ಕೆ ಸುಮಾರು ಎರಡು ಮೂರು ಸಾವಿರ ರೂಪಾಯಿ